‘ಮಯೂರ’ದ ಪ್ರತಿ ಸಂಚಿಕೆ ತನ್ನದೇ ಆದ ಸತ್ವಪೂರ್ಣ ಬರಹಗಳಿಂದ ಓದುಗರ ಓದಿನ ಹಸಿವನ್ನು ನೀಗಿಸುತ್ತಿದೆ. ಅದರಲ್ಲಿ ಪ್ರಕಟವಾಗುವ ಉತ್ತಮ ಬರಹಗಳು ಬದುಕಿನ ಅನೇಕ ಮಗ್ಗಲುಗಳನ್ನು ದರ್ಶಿಸುವಂತಿರುತ್ತವೆ.

**ಟಿ.ಎಸ್. ರಾಜೇಂದ್ರಪ್ರಸಾದ್, ತೇಕಲವಟ್ಟಿ**

‘ಪ್ರಬಂಧ ವಿಶೇಷ’ ಅಪಾರ ಖುಷಿ ನೀಡಿತು. ಎಲ್ಲ ಐದೂ ಪ್ರಬಂಧಗಳು ವಿವಿಧ ಬಗೆಯ ಚಿಂತನೆಗಳನ್ನು ಉದ್ದೀಪಿಸಿದವು. ‘ನಾಂದಿಪದ’ ಕೂಡ ಇಷ್ಟವಾಯಿತು.

**ಸುಶೀಲಾ ರಾವ್, ಉಡುಪಿ.**

ಸುಮಾವೀಣಾ ಅವರ ‘ಉಪ್ಪಿಟ್ಟೂ ಐ ಲೈಕ್ ಯು ಟೂ’ ಪ್ರಬಂಧ ಓದಿ ನಗೆಬುಗ್ಗೆಗಳು ಹಾರಿದವು. ಹಸಿ ಕಡಲೆಕಾಳು, ಗೋಡಂಬಿ, ಟೊಮೆಟೊ ಹಾಕಿದ ಉಪ್ಪಿಟ್ಟಿನ ಮೇಲೆ ತುಪ್ಪ, ಹಸಿ ಕೊಬ್ಬರಿ, ಕೊತ್ತಂಬರಿ ಸೊಪ್ಪಿನ ಅಲಂಕಾರವನ್ನು ನೆನೆದು ಬಾಯಿಯಲ್ಲಿ ನೀರೂರಿತು.

**ಬಸವರಾಜ ಹರಿಹರ, ಧಾರವಾಡ**

ಜಿ.ವಿ. ಆನಂದಮೂರ್ತಿ ಅವರ ಪ್ರಬಂಧ ‘ಹೊರಬೀಡು’ ಸುಮಾರು ಐವತ್ತು ವರ್ಷಗಳ ಹಿಂದಿನ ಗ್ರಾಮ ಭಾರತದ ಬದುಕಿನ ಅನಾವರಣದಂತಿದೆ. ಅದು ಮಹಾಕವಿ ಕಾಳಿದಾಸನ ‘ಶಾಕುಂತಲ’ ನಾಟಕದ ನಾಲ್ಕನೇ ದೃಶ್ಯವನ್ನು ನೆನಪಿಸಿತು. ನಾಗೇಶ ಹೆಗಡೆ ಅವರ ‘ಕನಸಿಗೆ ಕಟ್ಟಿದ ರೆಕ್ಕೆಪುಕ್ಕ’ ಹಾಗೂ ಇನ್ನಿತರ ಪ್ರಬಂಧಗಳು ಕೂಡ ಗ್ರಾಮ ಬದುಕಿನ ದಾಖಲೆಗಳಾಗಿವೆ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

‘ಕನಸಿಗೆ ಕಟ್ಟಿದ ರೆಕ್ಕೆಪುಕ್ಕ’ ಪ್ರಬಂಧ ಸ್ವಾರಸ್ಯಕರವಾಗಿತ್ತು. ಅಷ್ಟೇ




ಸ್ವಾರಸ್ಯಕರವಾಗಿ ಬಿ.ಜಿ. ಗುಜ್ಜಾರಪ್ಪ ಅವರು ಬರೆದ ಚಿತ್ರಗಳಿದ್ದವು.

**ಶಂಕರನಾರಾಯಣ ಭಟ್, ಹೊನ್ನಾವರ**

ಈ ಸಂಚಿಕೆಯ ಕವಿತೆಗಳು ಒಂದಕ್ಕಿಂತ ಒಂದು ಸೊಗಸಾಗಿವೆ. ಕಮಲಾಕರ ಕಡವೆಯವರ ಕವಿತೆ ಬೇಂದ್ರೆಯವರ ಕವಿತೆಗಳನ್ನು ನೆನಪಿಸುತ್ತದೆ. ಹಾಗೆಯೇ ಗೋಪೀನಾಥ ರಾವ್, ಬಿ.ಎಲ್. ವೇಣು, ಬಿ. ಪ್ರಭಾಕರ ಶಿಶಿಲ ಅವರ ಕತೆಗಳು ಓದಿಸಿಕೊಂಡವು.

**ಜ್ಯೋತಿ ಪರಬತ್, ಹುಬ್ಬಳ್ಳಿ**

ಲೇಖಕರಾದ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ಹಾಗೂ ಮತ್ತು ಗುಂಥರ್ ಗ್ರಾಸ್ ಸಂದರ್ಶನಗಳು ಆಪ್ತವಾಗಿದ್ದವು. ‘ತಮ್ಮ ಸ್ವಾರ್ಥ ಸಾಧನೆಗಾಗಿ ಜನರು ಸರ್ವಾಧಿಕಾರಿಯನ್ನು ಮುತ್ತುತ್ತಾರೆ; ಅವನನ್ನು ವಾಸ್ತವದಿಂದ ಅನತಿ ದೂರಕ್ಕೆ ಒಯ್ಯುವುದೇ ಎಲ್ಲರ ಅಂತಿಮ ಉದ್ದೇಶವಾಗುತ್ತದೆ’ ಎನ್ನುವ ಮಾರ್ಕ್ವೆಜ್‌ನ ಮಾತು ಪಿ. ಲಂಕೇಶ್ ಅವರ ನಾಟಕ ‘ಗುಣಮುಖ’ವನ್ನು ನೆನಪಿಸಿತು.

**ರವಿ ಮುನವಳ್ಳಿ, ಸವದತ್ತಿ,**
**ನಿವೇದಿತಾ ಎಚ್., ಮೈಸೂರು**